ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

◆ ಜಗತ್ತಿನ ಅತಿ ದೊಡ್ಡ ಪಾಪ ಯಾವುದು?



ಕಾಡುಪಾಪ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

◆ ಪತಿಗೆ ತನ್ನ ಸತಿ ಕಡು ಚೆಲುವೆಯಾದರೂ ಚಿಂತೆಯಂತೆ. ಯಾಕೆ?

ಪ್ರತಿ ಮ್ಯಾಚಿಂಗ್ ಐಟಂಗೂ ಎಷ್ಟು ಪೀಕುತ್ತಾಳೋ ಎಂಬ ಭಯದಲ್ಲೇ ಜೀವಿಸಬೇಕಲ್ಲ!

ವಿ. ಹಮೀದ್, ವಿಟ್ಲ

◆ ಮಂತ್ರಿಗಳು ಬಿಳಿಯ ವಸ್ತ್ರ ಧರಿಸುವುದೇಕೆ?

ಇಂದೊಂದು, ನಾಳೆಯೊಂದು ಬಣ್ಣದ ಬಟ್ಟೆ ಧರಿಸಿದರೆ ನ್ಯೂಸ್ ಚಾನಲ್‌ಗಳು 'ಬಣ್ಣ ಬದಲಾಯಿಸಿದ ಮಂತ್ರಿ' ಎಂದು ಅರಚುತ್ತವಲ್ಲ!

ಕೆ. ರಾಮದಾಸ ಉಡುಪ, ಬೆಂಗಳೂರು

◆ ನೂತನ ಭವ್ಯ ಬಂಗಲೆಗೆ 'ಸುಖವಿಲ್ಲಾ' ಎಂದು ಹೆಸರಿಟ್ಟರೆ ಅದು 'ದುಃಖಾಲಯ' ಎಂದು ಅರ್ಥವಾಗುವುದಿಲ್ಲವೆ?



ಹಿರಿಯರೊಬ್ಬರು ಬಿಟ್ಟ ವಿಲ್ ಮೂಲಕ ಬಂಗಲೆ ಕಟ್ಟಲಾಗಿದ್ದು, ಆ ವಿಲ್ ತಂದ ಈ ಸುಖವೇ 'ಸುಖವಿಲ್ಲಾ'ದ ಹಿನ್ನೆಲೆಯಂತೆ.

ಜಾಕೋಬ್ ಡಿಸೋಜ, ಕುರುವಳ್ಳಿ

◆ ಮುಗ್ಧರು ಎಂದರೆ ಯಾರು?

ಪ್ರತಿ ಬೆಳಗ್ಗೆಯೂ ಸುಳ್ಳು ಹೇಳುವ ವಾಹಿನಿಗಳ ಜೋತಿಷಿಗಳ ಮಾತುಗಳನ್ನು ನಿಜವೆಂದು ಪಾಲಿಸುವವರು.

ತಲಕಾಡು ಶ್ರೀನಿಧಿ, ಬೆಂಗಳೂರು

◆ ರಾಜಕಾರಣದ ಅಧೋಗತಿಗೆ ರಾಜಕಾರಣಿಗಿಂತ ಮಾಧ್ಯಮವೇ ಪ್ರಬಲ ಕಾರಣ. ಏನಂತೀರಿ ಸಾರ್?

ಮಾಧ್ಯಮ ಹೆಚ್ಚೆಂದರೆ ಬೊಗಳುವ ಶ್ವಾನ, ಹಣ, ಜಾತಿಗಾಗಿ ಅಯೋಗ್ಯರಿಗೆ ಮತ ನೀಡುವವರೇ ಕಚ್ಚುವ ಶ್ವಾನಗಳು.

ರತ್ನಜ, ಮೈಸೂರು

◆ ಅಕ್ಷಯ, ವಿಭವ ಸಂವತ್ಸರಗಳಲ್ಲಿ ಹುಟ್ಟಿದರೆ ಅದೇ ಹೆಸರಿಡಬಹುದು. ರಾಕ್ಷಸನಾಮ ಸಂವತ್ಸರದಲ್ಲಿ ಹುಟ್ಟಿದರೆ?

**Rock** ಶಶಾಂಕ್ ಎಂದಿಡಿ .ರಾಕ್ ಸ್ಟಾರ್ ಆಗಿ ಬೆಳೆದಾನು ಅಥವ ಕಲ್ಲೂರುವ ರೌಡಿಯಾಗಿ ಮೆರೆದಾನು.

ಎಂ.ಬಿ. ರಂಗಪ್ಪಶೆಟ್ಟಿ ಮೋಕಾ

◆ ದೇಶದ ಒಬ್ಬ ರಾಜಕೀಯ ವ್ಯಕ್ತಿಯೂ ಇದುವರೆಗೆ ಆತ್ಮಹತ್ಯೆ ಹಾಡಿಕೊಂಡಿಲ್ಲವೇಕೆ?

ಆ ವಿಷಜಂತುಗಳ ಮೇಲೆ ವಿಷ ಪರಿಣಾಮ ಬೀರುವುದಿಲ್ಲ; ಮಿಕ್ಕೆಲ್ಲ ವಿಧಗಳನ್ನು ಕೈಗೊಳ್ಳಲು ಸೋಮಾರಿತನ...

ಪಿ.ಎನ್. ಶ್ರೀವತ್ಸ ಬೆಂಗಳೂರು

◆ ಸ್ನೇಹಿತರ ದಿನ ಆಚರಿಸುವಂತೆ ಶತ್ರುಗಳ ದಿನವನ್ನೂ ಆಚರಿಸುವಂತಿದ್ದರೆ...?

ಕೆಲವರ ವೆಡ್ಡಿಂಗ್ ಆನಿವರ್ಸರಿ ಹಾಗೆಯೇ ಆಚರಿಸಲ್ಪಡುತ್ತದೆ.

ಪೇಂಟರ್ ಪಾಪು, ಸಂತೆಮರಹಳ್ಳಿ

◆ ನೆಮ್ಮದಿ ಪಡೆಯುವ ಮಾರ್ಗ ಯಾವುದು?

ಶಿಖರದತ್ತ ದೃಷ್ಟಿ ನೆಡುವ ಬದಲು ಕಣಿವೆಯತ್ತ ದೃಷ್ಟಿ ನೆಟ್ಟು ನಾವೇ ಮೇಲಿದ್ದೇವೆ ಎಂದುಕೊಳ್ಳುವುದು.

ಬೂಕನಕೆರೆ ವಿಜೇಂದ್ರ, ಮೈಸೂರು

◆ ಹೆಚ್ಚು ಮಾತನಾಡುವವರು ಹೆಚ್ಚು ವರ್ಷ ಬದುಕುತ್ತಾರಂತೆ, ಹೌದಾ?

ಹಾಗೇನಿಲ್ಲ; ಅವರಿಂದ ಬೋರ್ ಹೊಡೆಸಿಕೊಂಡವರಿಗೆ ಹಾಗೆ ಅನ್ನಿಸಿರುತ್ತದೆ ಅಷ್ಟೆ.

ಎ.ಕೆ. ಪಟ್ಟಾಭಿ ಬೆಂಗಳೂರು

◆ ಸ್ತ್ರೀಯರು ಸದಾ ಕನ್ನಡಿಯ ಮುಂದಿರುತ್ತಾರೆ. ಅಕಸ್ಮಾತ್ ಕನ್ನಡಿಯ ಆವಿಷ್ಕಾರವೇ ಆಗಿರದಿದ್ದರೆ ಅವರ ಪರಿಸ್ಥಿತಿ ಹೇಗಿರುತ್ತಿತ್ತು?

ಗಂಡಸರ ಬೋಡುತಲೆಗೆ ವಿಶೇಷ ಬೇಡಿಕೆ ಬರುತ್ತಿತ್ತು.

## ಬಹುಮಾನಿತ ಪ್ರಶ್ನೆ

ಫಾಲನೇತ್ರ ಸಜ್ಜನ, ಶಿರಸಿ

◆ ವಧುವನ್ನು ಅಪೇಕ್ಷಿಸಿ ತಪಸ್ಸು ಮಾಡಿದ ವರನಿಗೆ ಪ್ರತ್ಯಕ್ಷನಾದ ದೇವರು ವರ ಬೇಕೆ ಎಂದು ಕೇಳುವುದು ಸರಿಯೆ?

ಅದು 'ವ' ವರಿಸಲರ್ಹವಾದ; 'ರ' ರಮಣಿ ಬೇಕೆ ಎಂದು ಕೇಳುವ ಪರಿಯಂತೆ!

ಮಾಲತಿ ರಾಜು, ಬೆಂಗಳೂರು

◆ ಮಠಾಧೀಶರು ಬದುಕಿರುವಾಗಲೇ ಅವರ ಭಾವಚಿತ್ರಕ್ಕೆ ಹಾರ ಹಾಕಿರುತ್ತಾರಲ್ಲಾ...?

ಬದುಕಿರುವಾಗಲೇ ಅವರ ಭಾವಚಿತ್ರಕ್ಕೆ ದೂಳು, ಜೇಡರಬಲೆ ಕಟ್ಟದಿರಲೆಂಬ ಸದಾಶಯ.

ವಿದ್ಯಾ ಎನ್ ಪೈ, ಕಾಸರಕೋಡ

◆ ಕನ್ನಡ ಚಿತ್ರರಂಗವನ್ನು 'ಸ್ಯಾಂಡಲ್ ವುಡ್' ಎಂದು ಕರೆಯುತ್ತಾರೆ. ಏಕೆ?

**sand** (ಮರಳಲ್ಲಿರುವ) **wood** (ಕಾಡು) ಮರಳುಗಾಡು ಎಂದಿರಬಹುದು. ಅಪರೂಪಕ್ಕೊಂದು ಓಯಸಿಸ್ ಇರುವ ಕ್ಷೇತ್ರವಲ್ಲವೆ!

ರತ್ನ ಸತ್ಯೇಂದ್ರ, ಮಂಗಳೂರು

ಆಗರ್ಭ ಶ್ರೀಮಂತ ಸಹ ತನ್ನ ತಾಯಿ ತಂದೆಯನ್ನು ವೃದ್ಧಾಶ್ರಮದಲ್ಲಿ ಬಿಡುವುದು ಏಕೆ?



ಹಣವನ್ನು ನೋಡಿಕೊಳ್ಳಲೇ ಸಮಯವಿಲ್ಲ, ಜನವನ್ನು ನೋಡುಕೊಳ್ಳುವುದು ಹೇಗೆ ಎಂಬ ಸ್ಥಿತಿ ಉಂಟಾಗಿರುತ್ತಂತೆ.

ಆರ್. ಮಧುಸೂದನ್, ಹಾಸನ

◆ 'ನುಡಿದರೆ ಮುತ್ತಿನ ಹಾರದಂತಿರಬೇಕು' ಎನ್ನುವರಲ್ಲ, ಮುತ್ತಿನ ಹಾರದಂತೆ ನುಡಿಯುವುದು ಹೇಗೆ?

ನುಡಿಮುತ್ತುಗಳನ್ನು ವಿಷಯದ ದಾರದಲ್ಲಿ ಪೋಣಿಸಿ.

■ ರಾಮ್